<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆ: **419/2024**</u>

| | | |
|---|---|---|
| <u>ಪಿರ್ಯಾದಿ</u> | : | ರಾಜ್ಯ, ಪರವಾಗಿ ಕಳಸ ಪೊಲೀಸ್ ಠಾಣೆ,<br>ಕಳಸ. |

ವಿರುದ್ಧ

| | | |
|---|---|---|
| <u>ಆರೋಪಿತರು</u> | : | **1.** ರಾಮಮೂರ್ತಿ ಡಿ., ವಯಸ್ಸು 50 ವರ್ಷ,<br>ಬಿನ್ ದೇವಪಯ್ಯ, ವಾಸಃ ಓಣಿಗಂಡಿ,<br>ಮಾವಿನಕೆರೆ ಗ್ರಾಮ, ಕಳಸ ತಾಲ್ಲೂಕು. |
| | | **2.** ಸುಭಾಷ್ ಚಂದ್ರ ಹೆಚ್.ಆರ್. ಯಾನೆ ಹಿಂಚಳ್ಳಿ ಸುಭಾಷ್,<br>ವಯಸ್ಸು 50 ವರ್ಷ, ಬಿನ್ ರಾಮನಾಥಯ್ಯ,<br>ವಾಸಃ ಹಿಂಚಳ್ಳಿ, ಮಾವಿನ ಕೆರೆ ಗ್ರಾಮ,<br>ಕಳಸ ತಾಲ್ಲೂಕು. |
| | | **3.** ಹರಿ ಯಾನೆ ಹರಿನಾರಾಯಣ,<br>ವಯಸ್ಸು 53 ವರ್ಷ, ಬಿನ್ ದಿಃ ಸುಬ್ಬರಾವ್,<br>ವಾಸಃ ಮುಖ್ಯ ರಸ್ತೆ, ಮಾವಿನಕೆರೆ ಗ್ರಾಮ,<br>ಕಳಸ ತಾಲ್ಲೂಕು. |

<u>ದೋಷಾರೋಪಣೆ</u>

ನಾನು ಶ್ರೀ ವಿಶ್ವನಾಥ್.ಎ, C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ಕಳಸ ಪೊಲೀಸ್ ಠಾಣಾ ವ್ಯಾಪ್ತಿಯ ಕಳಸ ತಾಲ್ಲೂಕು ಮಾವಿನಕೆರೆ ಗ್ರಾಮದಲ್ಲಿರುವ ಕಳಸೇಶ್ವರ ಸ್ವಾಮಿ ದೇವಸ್ಥಾನದ ಬಳಿ ಇರುವ ಅಂಗಡಿ ಮಳಿಗೆಗಳಲ್ಲಿ ಒಂದು ಮಳಿಗೆಯನ್ನು ಚಾಸಾ-1-ಪ್ರಮಿಳಾ ರವರು ಬಾಡಿಗೆಗೆ ಪಡೆದು ಕೌಸ್ತುಭ ಹೆಸರಿನ ಕ್ಯಾಂಟಿನ್ ನಡೆಸುತ್ತಿದ್ದು, ದಿನಾಂಕ 27.12.2023 ರಂದು ರಾತ್ರಿ 08.45 ರ ಸಮಯದಲ್ಲಿ ಚಾಸಾ-1 ಪ್ರಮಿಳಾ ರವರು ವ್ಯಾಪಾರದ ಸಮಯ ಮುಗಿದಿದ್ದರಿಂದ ತಾನು ನಡೆಸುತ್ತಿರುವ ಕೌಸ್ತುಭ ಹೆಸರಿನ ಕ್ಯಾಂಟೀನ್ ನ ಮುಂಭಾಗದ ಜಾಗದಲ್ಲಿ ಇಟ್ಟಿದ್ದಂತಹ ಟೇಬಲ್ ಮತ್ತು ಕುರ್ಚಿಗಳನ್ನು ತೆಗೆಯಲು ಮುಂದಾದಾಗ, ಆ ಸಮಯದಲ್ಲಿ ಅಲ್ಲಿ ಅಡೆತಡೆಯಾಗುವಂತೆ ನಿಂತಿದ್ದ 1 ನೇ ಆರೋಪಿಯಾದ ನಿಮಗೆ ನಿಮ್ಮ ವಾಹನವನ್ನು ತೆಗೆಯುವಂತೆ ತಿಳಿಸಿರುತ್ತಾರೆ, ಇದರಿಂದ ಸಿಟ್ಟಾದ 1 ನೇ ಆರೋಪಿಯಾದ ನೀವು 2 ಮತ್ತು 3 ನೇ ಆರೋಪಿತರೊಂದಿಗೆ ಬಂದು ಏಕಾಏಕಿ ಅಂಗಡಿಯ ಮುಂಭಾಗದಲ್ಲಿ ಕ್ಯಾಂಟೀನ್ ನ ಟೇಬಲ್ ಮತ್ತು ಕುರ್ಚಿಗಳನ್ನು ಜೋಡಿಸಿದ್ದ ತೆರೆದ ಸ್ಥಳಕ್ಕೆ ನುಗ್ಗಿ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಈ

ರೀತ್ಯಾ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ **447** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ-1 ಪ್ರಮಿಳಾ ರವರಿಗೆ ಸೂಳೆ, ನಾವು ಗಾಡಿ ತೆಗೆಯಲ್ಲ, ಶಾಟ ತರಿದುಕೊಳ್ಳುತ್ತಿಯಾ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ **504** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ-1 ಪ್ರಮಿಳಾ ರವರು ಧರಿಸಿದ್ದ ಬಟ್ಟೆಯನ್ನು ಹಿಡಿದು ಎಳೆದಾಡಿ, ಹಲ್ಲೆ ಮಾಡಲು ಪ್ರಯತ್ನಿಸಿ, ಮಾನಭಂಗ ಮಾಡುವುದಾಗಿ ಬೆದರಿಸಿ ಅವರ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿ ಮಾನಹಾನಿ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ **354** ಬಿ ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ-1 ಪ್ರಮಿಳಾ ರವರು ಧರಿಸಿದ್ದ ಬಟ್ಟೆಯನ್ನು ಹಿಡಿದು ಎಳೆದಾಡಿ, ಹಲ್ಲೆ ಮಾಡಲು ಪ್ರಯತ್ನಿಸಿ, ಮಾನಭಂಗ ಮಾಡುವುದಾಗಿ ಬೆದರಿಸಿ ಮಹಿಳೆಯಾದ ಅವರ ಮಾನಕ್ಕೆ ಧಕ್ಕೆಯನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ **354** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ-1 ಪ್ರಮಿಳಾ ರವರಿಗೆ ಇನ್ನು ಮುಂದೆ ಕ್ಯಾಂಟೀನ್ ತೆರೆದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ

ನೀವುಗಳು ಭಾರತ ದಂಡ ಸಂಹಿತೆ ಕಲಂ **506** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ*,* ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ*.*

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

***(***ದಿನಾಂಕ 20.01.2025 ರಂದು ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ*,* ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು*.* ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ***)***

***Sd/-***

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ*.*ಎಂ*.*ಎಫ್*.*ಸಿ*,* ಮೂಡಿಗೆರೆ*.*

ಮೂಡಿಗೆರೆ
ದಿನಾಂಕಃ 20.01.2025